5617

(70)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಚಂದ್ರಂಪಳ್ಳಿ ಮತ್ತು ಹತ್ತಿಕುಣಿ ಯೋಜನೆಯ ಆಧುನೀಕರಣ ಕಾಮಗಾರಿಗಳನ್ನು ಎಐಬಿಪಿ-ಇಆರ್‌ಎಂ ಕೇಂದ್ರ ಸರ್ಕಾರದ ಸಹಾಯ ಧನದೊಂದಿಗೆ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರಿಗೆ ವರ್ಗಾಯಿಸುವ ಬಗ್ಗೆ.

****

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ:ಜಸಂಇ 263 ಸೇಎಸು 2011, ದಿನಾಂಕ:18/01/2012.

**ಪ್ರಸ್ತಾವನೆ:**

ಚಂದ್ರಂಪಳ್ಳಿ ಯೋಜನೆ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುತ್ತದೆ. ಈ ಯೋಜನೆಗೆ ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 159 ಎಂಎಂಐ 1963 ದಿನಾಂಕ:16/12/201963 ರಲ್ಲಿ ರೂ.99.84 ಲಕ್ಷಗಳ ಮೊತ್ತಕ್ಕೆ ಅನುಮೋದನೆ ನೀಡಲಾಗಿತ್ತು. ನಂತರ 2009-10ನೇ ಸಾಲಿನಲ್ಲಿ ಯೋಜನೆಯ ಕಾಲುವೆ ಜಾಲದ ಪರಿಸ್ಥಿತಿ ಕೆಟ್ಟಿದ್ದು ಸುಗಮವಾಗಿ ನೀರು ಹರಿಸುವ ಹಾಗೂ ಯೋಜಿತ ನೀರಾವರಿ ಕ್ಷೇತ್ರಕ್ಕೆ ನೀರನ್ನು ಒದಗಿಸುವ ದೃಷ್ಟಿಯಿಂದ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿ ಸರ್ಕಾರದ ಆದೇಶ ಸಂ:ಜಸಂಇ 31 ಎಂಟಿಜಡ್ 2007 ದಿನಾಂಕ:09/03/2010 ರಲ್ಲಿ AIBP-ERM ರಡಿ ಕೈಗೊಳ್ಳಲು ರೂ.14.93 ಕೋಟಿಗಳಿಗೆ (2009-10 ನೇ ಸಾಲಿನ ದರಪಟ್ಟಿ ಆಧರಿಸಿ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಹತ್ತಿಕುಣಿ ಯೋಜನೆ ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿದ್ದು, ಮೂಲ ಅಂದಾಜು ಮೊತ್ತ ರೂ.22.08 ಲಕ್ಷಗಳ ಮೊತ್ತಕ್ಕೆ 1957-58 ರಲ್ಲಿ ಅನುಮೋದನೆ ನೀಡಲಾಗಿತ್ತು. ನಂತರ 2009-10ನೇ ಸಾಲಿನಲ್ಲಿ ಯೋಜನೆಯ ಕಾಲುವೆ ಜಾಲದ ಪರಿಸ್ಥಿತಿ ಕೆಟ್ಟಿದ್ದು ಸುಗಮವಾಗಿ ನೀರು ಹರಿಸುವ ಹಾಗೂ ಯೋಜಿತ ನೀರಾವರಿ ಕ್ಷೇತ್ರಕ್ಕೆ ನೀರನ್ನು ಒದಗಿಸುವ ದೃಷ್ಟಿಯಿಂದ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿ ಸರ್ಕಾರದ ಆದೇಶ ಸಂ:ಜಸಂಇ 39 ಎಂಟಿಜಡ್ 2008 ದಿನಾಂಕ:09/03/2010 ರಲ್ಲಿ AIBP-ERM ರಡಿ ಕೈಗೊಳ್ಳಲು ರೂ.6.75 ಕೋಟಿಗಳಿಗೆ (2009-10ನೇ ಸಾಲಿನ ದರಪಟ್ಟಿ ಆಧರಿಸಿ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ನಂತರ ಚಂದ್ರಂಪಳ್ಳಿ ಯೋಜನೆಗೆ AIBP-ERM ರಡಿ ಕೇಂದ್ರ ಸಹಾಯಧನವನ್ನು ಪಡೆಯಲು ಸಲ್ಲಿಸಲಾದ ಪ್ರಸ್ತಾವನೆಗೆ ಕೇಂದ್ರ ಯೋಜನಾ ಆಯೋಗದ ಪತ್ರ ಸಂಖ್ಯೆ:20(10)/2010-

ಡಬ್ಲ್ಯೂಆರ್ ದಿನಾಂಕ:03/09/2010 ರಡಿ ಹೂಡಿಕೆ ತೀರುವಳಿಯನ್ನು ನೀಡಲಾಗಿರುತ್ತದೆ. ಹತ್ತಿಕುಣಿ ಯೋಜನೆಗೆ AIBP-ERM ರಡಿ ಕೇಂದ್ರ ಸಹಾಯಧನವನ್ನು ಪಡೆಯಲು ಸಲ್ಲಿಸಲಾದ ಪ್ರಸ್ತಾವನೆಗೆ ಕೇಂದ್ರ ಯೋಜನಾ ಆಯೋಗದ ಪತ್ರದ ಸಂಖ್ಯೆ:20(10)/2010-ಡಬ್ಲ್ಯೂಆರ್ ದಿನಾಂಕ:04/01/2011 ರಡಿ ಹೂಡಿಕೆ ತೀರುವಳಿಯನ್ನು ನೀಡಲಾಗಿರುತ್ತದೆ.

ಮುಂದುವರೆಸುತ್ತಾ, ಈ ಎರಡೂ ಯೋಜನೆಗಳಿಗೆ 2010-11ನೇ ಸಾಲಿನಲ್ಲಿ AIBP-ERM ರಡಿ ಕೇಂದ್ರ ಸಹಾಯಧನ ಬಿಡುಗಡೆಗಾಗಿ 'ಫಾರಂ-ಎನ್' ನಲ್ಲಿ ಕೇಂದ್ರ ಜಲ ಆಯೋಗದ ಮುಖ್ಯ ಇಂಜಿನಿಯರ್ (ದಕ್ಷಿಣ), ಬೆಂಗಳೂರು ರವರಿಗೆ ದಿನಾಂಕ:10/03/2011 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಆ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದರ ಬಗ್ಗೆ ರಾಜ್ಯ ಸರ್ಕಾರದಿಂದ ಖಾತರಿ ಪಡಿಸುವಂತೆ ಕೇಂದ್ರ ಜಲ ಆಯೋಗದಿಂದ ಕೋರಲಾಗಿತ್ತು. ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿಕೊಂಡು ಆರ್ಥಿಕ ಇಲಾಖೆಯು ನೇರವಾಗಿ ಮುಖ್ಯ ಇಂಜಿನಿಯರ್ (ದಕ್ಷಿಣ), ಕೇಂದ್ರ ಜಲ ಆಯೋಗ, ಬೆಂಗಳೂರು ಇವರಿಗೆ 2011-12ನೇ ಸಾಲಿನಲ್ಲಿ ಅನುದಾನ ಒದಗಿಸುವುದರ ಬಗ್ಗೆ ಖಾತರಿಪಡಿಸಿ ದಿನಾಂಕ:07/05/2011ರ ಪತ್ರದಲ್ಲಿ ಕೇಂದ್ರ ಸಹಾಯಧನವನ್ನು 2011-12ನೇ ಸಾಲಿಗೆ ಬಿಡುಗಡೆ ಮಾಡುವಂತೆ ಕೇಳಿಕೊಳ್ಳಲಾಯಿತು. ಪುನ: ಕೇಂದ್ರ ಸಹಾಯಧನವನ್ನು 2011-12ನೇ ಸಾಲಿನಲ್ಲಿ ಬಿಡುಗಡೆ ಮಾಡುವಂತೆ ಕೋರಿ 'ಫಾರಂ-ಎನ್' ನಲ್ಲಿ ಪ್ರಸ್ತಾವನೆಯನ್ನು ದಿನಾಂಕ:16/06/2011ರಲ್ಲಿ ಸಲ್ಲಿಸಲಾಯಿತು. ಮುಖ್ಯ ಇಂಜಿನಿಯರ್, ಕೇಂದ್ರ ಜಲ ಆಯೋಗ, ಬೆಂಗಳೂರು ಕಛೇರಿಯಿಂದ ಈ ಎರಡೂ ಯೋಜನೆಗಳಿಗೆ ಪತ್ರದ ಸಂಖ್ಯೆ:73/13-2009-ಡಿಐಆರ್ (ಎಂಓಎನ್)/1374-76 ದಿನಾಂಕ:21/06/2011 ಮತ್ತು ಪತ್ರಸಂಖ್ಯೆ:73/13-2009-ಡಿಐಆರ್ (ಎಂಓಎನ್)/1371-73 ದಿನಾಂಕ:21/06/2011 ರಲ್ಲಿ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಕೇಂದ್ರ ಜಲ ಆಯೋಗ, ನವದೆಹಲಿಗೆ ಕಳುಹಿಸಿಕೊಡಲಾಯಿತು.

ನಂತರ ಕೇಂದ್ರ ಜಲ ಆಯೋಗ, ನವದೆಹಲಿ ಇವರಿಂದ ಕೆಲವು ಆಕ್ಷೇಪಣೆಗಳಿಗೆ ಸ್ಪಷ್ಟೀಕರಣವನ್ನು ನೀಡುವಂತೆ ಕೋರಲಾಯಿತು. ಅದರಂತೆ ಪರಿಷ್ಕರಿಸಿದ 'ಫಾರಂ-ಎನ್' ಅನ್ನು 2011-12ನೇ ಸಾಲಿಗೆ ಪುನ: ಸರ್ಕಾರದ ದಿನಾಂಕ:26/09/2011 ರ ಪತ್ರದಲ್ಲಿ ಕಳುಹಿಸಿ ಕೊಡಲಾಯಿತು. ಈ ಪರಿಷ್ಕರಿಸಿದ ಫಾರಂ-ಎನ್ ಅನ್ನು ಮುಖ್ಯ ಇಂಜಿನಿಯರ್, ಕೇಂದ್ರ ಜಲ ಆಯೋಗ, ಬೆಂಗಳೂರು ರವರಿಂದ ಕೇಂದ್ರ ಜಲ ಆಯೋಗ, ನವದೆಹಲಿಗೆ ದಿನಾಂಕ:03/10/2011 ರಂದು ಕಳುಹಿಸಿ ಕೊಡಲಾಗಿರುತ್ತದೆ. ಪ್ರಸ್ತಾವನೆಗಳನ್ನು ಕೇಂದ್ರ ಜಲ ಆಯೋಗದಿಂದ ಕೇಂದ್ರ

ಜಲಸಂಪನ್ಮೂಲ ಇಲಾಖೆಯ ಜಂಟಿ ಕಮೀಷನರ್ (ಪಿಆರ್) ಇವರಿಗೆ ದಿನಾಂಕ:25/10/2011 ರಂದು ಸಲ್ಲಿಸಲಾಗಿದ್ದು, ನಂತರ ಈ ಎರಡೂ ಯೋಜನೆಗಳು ಬರಪೀಡಿತ ಪ್ರದೇಶಕ್ಕೆ ಒಳಪಡುವುದರ ಕುರಿತು ದಿನಾಂಕ:15/02/2012 ರ ಸರ್ಕಾರದ ಪತ್ರದಲ್ಲಿ ದೃಢೀಕರಿಸಲಾಯಿತು.

ಈ ಮಧ್ಯೆ ಈ ಎರಡೂ ಯೋಜನೆಗಳು ಕಾರಂಜಾ ಯೋಜನಾ ವಿಭಾಗ, ಬೀದರ್ ಇದರ ಕಾರ್ಯ ವ್ಯಾಪ್ತಿಗೆ ಒಳಪಟ್ಟಿರುವ ಚಂದ್ರಂಪಳ್ಳಿ ಯೋಜನಾ ಉಪ ವಿಭಾಗ, ಚಂದಾಪುರ ಇದರ ಅಡಿ ಇದ್ದು, ಓದಲಾದ ಸರ್ಕಾರಿ ಆದೇಶದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯ ಬೆಣ್ಣೆತೊರಾ ಯೋಜನಾ ನಿರ್ಮಾಣ ವಿಭಾಗ, ಗುಲ್ಬರ್ಗಾ ಇದರ ಆಡಳಿತ ಕಾರ್ಯವ್ಯಾಪ್ತಿಗೆ ಒಳಪಡಿಸಿ ಆದೇಶಿಸಲಾಗಿತ್ತು.

ಈಗ ಮುಖ್ಯ ಇಂಜಿನಿಯರ್, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ ರವರ ದಿನಾಂಕ:10/07/2012 ರ ಪತ್ರಗಳಲ್ಲಿ ಚಂದ್ರಂಪಳ್ಳಿ ಹಾಗೂ ಹತ್ತಿಕುಣಿ ಯೋಜನೆಗಳ AIBP-ERM ರಡಿ ಕೇಂದ್ರ ಸಹಾಯಧನ ಪಡೆಯುವ ಪ್ರಸ್ತಾವನೆ ಕೇಂದ್ರ ಹಣಕಾಸು ಸಚಿವಾಲಯದಲ್ಲಿ ಅನುಮೋದನೆ ಹಾಗೂ ಹಣ ಬಿಡುಗಡೆಗಾಗಿ ಬಾಕಿ ಇರುತ್ತದೆ ಎಂದು ತಿಳಿಸುತ್ತಾ, ಚಂದ್ರಂಪಳ್ಳಿ ಯೋಜನೆಯಡಿ ಏಳು ಪ್ಯಾಕೇಜುಗಳು ಹಾಗೂ ಹತ್ತಿಕುಣಿ ಯೋಜನೆಯಡಿ ಮೂರು ಪ್ಯಾಕೇಜ್‌ಗಳ ಕಾಮಗಾರಿಗಳನ್ನು ಈಗಾಗಲೇ ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದ್ದು ಈಗ ಕೇಂದ್ರ ಸಹಾಯಧನ ಲಭ್ಯವಿಲ್ಲದ ಪ್ರಯುಕ್ತ ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿದ್ದು, ಕೇಂದ್ರ ಸಹಾಯಧನ ಪಡೆಯುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ,

ಆದುದರಿಂದ, ಈ ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವುದನ್ನು ಆಧರಿಸಿ ಹಾಗೂ ಮುಖ್ಯ ಇಂಜಿನಿಯರ್ ರವರು ಈಗ ಕೋರಿರುವುದನ್ನು ಪರಿಗಣಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ,

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 41 ಎಂಟಿಐಜಡ್ 2012, ದಿನಾಂಕ:25/07/2012**

ಚಂದ್ರಂಪಳ್ಳಿ ಮತ್ತು ಹತ್ತಿಕುಣಿ ಯೋಜನೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡು AIBP-ERM ರಡಿ ಕೇಂದ್ರ ಸಹಾಯಧನದೊಂದಿಗೆ ಶೀಘ್ರದಲ್ಲಿ ಪೂರ್ಣಗೊಳಿಸಿ ನೀರಾವರಿಯನ್ನು ಒದಗಿಸುವ ದೃಷ್ಟಿಯಿಂದ ಹಾಗೂ ಈಗಾಗಲೇ ಸಂಬಂಧಿಸಿದ ಚಂದ್ರಂಪಳ್ಳಿ ಉಪ ವಿಭಾಗ, ಚಂದಾಪುರ ಇದನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕರ್ನಾಟಕ ನೀರಾವರಿ ನಿಗಮ

ನಿಯಮಿತದಡಿ ಬೆಣ್ಣೆತೊರಾ ಯೋಜನಾ ನಿರ್ಮಾಣ ವಿಭಾಗ, ಗುಲ್ಬರ್ಗಾ ಇದರ ಆಡಳಿತ ಕಾರ್ಯವ್ಯಾಪ್ತಿಗೆ ಒಳಪಡಿಸಿದ್ದು. ಈ ಹಿನ್ನೆಲೆಯಲ್ಲಿ ಹತ್ತಿಕುಣಿ ಮತ್ತು ಚಂದ್ರಂಪಳ್ಳಿ ಯೋಜನೆಗಳ AIBP-ERM ರಡಿ ಕೇಂದ್ರ ಯೋಜನಾ ಆಯೋಗದಿಂದ ಕ್ರಮವಾಗಿ ರೂ.14.93 ಕೋಟಿಗಳು ಹಾಗೂ ರೂ.6.75 ಕೋಟಿಗಳಿಗೆ ಹೂಡಿಕೆ ತೀರುವಳಿ ಪಡೆದಿದ್ದು, AIBP-ERM ರಡಿ ಆಧುನೀಕರಣ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸುವ ಉದ್ದೇಶದೊಂದಿಗೆ ಈ ಕೂಡಲೇ ಜಾರಿಗೆ ಬರುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಗೆ ಒಳಪಡಿಸಿ, ಪ್ರಸಕ್ತ ಸಾಲಿನಲ್ಲಿ ನಿಗಮಕ್ಕೆ ಒದಗಿಸಲಾದ AIBP ಅನುದಾನದಲ್ಲಿ ಈ ಯೋಜನೆಗಳಿಗೆ ಅನುದಾನ ಒದಗಿಸಿಕೊಳ್ಳುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

25.07.12

(ಐ.ಡಿ.ಧಮನ್)
ವಿಶೇಷ ಕರ್ತವ್ಯಾಧಿಕಾರಿ
ಜಲ ಸಂಪನ್ಮೂಲ ಇಲಾಖೆ(ಕೃಭಾಜನಿ).

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು. ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2), ಕರ್ನಾಟಕ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನಸೌಧ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ.
6. ಶಾಖಾ ರಕ್ಷಕ ಕಡತ/ ಹೆಚ್ಚಿನ ಪ್ರತಿಗಳು.